(ಸದನವು 2.01ಕ್ಕೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 3–00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಮಧ್ಯಾಹ್ನ 3.10ಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರು ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದ್ದರು)

6. ಅಧ್ಯಕ್ಷರ ಅಪ್ಪಣೆ ಮೇರೆಗೆ: (ವಿಧಾನ ಸಭೆಯನ್ನು ಕಡೆಗಾಣಿಸುತ್ತಿರುವ ಬಗ್ಗೆ)

†**ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** : ಮಾನ್ಯ ಅಧ್ಯಕ್ಷರೇ, ಒಂದು ಸಂಗತಿಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಸ್ವಲ್ಪ ಗಮನ ಕೊಟ್ಟರೆ ಒಳ್ಳೆಯದು. ಏಕೋ, ಏನೋ, ಈ ಮನೆಯ ಸ್ಯಾಂಕ್ಟಿಟಿಯನ್ನೇ ಕಡಿಮೆ ಮಾಡುವಂಥ, ಒಂದು ರೀತಿ ಹಕ್ಕುಚ್ಯುತಿಯಾಗುವಂಥ ಕೆಲಸಗಳನ್ನು ನಮ್ಮ ಸರ್ಕಾರ ಮಾಡುತ್ತಿದೆ. ಈ ಲ್ಯಾಂಡ್ ಸ್ಕ್ಯಾಮ್ ಬಗ್ಗೆ ಸಾಕಷ್ಟು ಸುದೀರ್ಘವಾದಂಥ ಚರ್ಚೆ ಈ ಮನೆಯಲ್ಲಿ ಆಯಿತು. ಆದ ಮೇಲೆ ಅದಕ್ಕೆ ರಿಪ್ಲೈ ಎಲ್ಲಿ ಮಾಡಬೇಕು? ಈ ಮನೆಯಲ್ಲಿ ತಾನೇ ಮಾಡಬೇಕು. ಆದರೆ, ಇದನ್ನು ಸಿಬಿಐಗೆ ವಹಿಸಿದ್ದೇವೆ ಎಂದು ಸರ್ಕಾರ ಹೇಳಿದಂಥ ಮಾತು ಟಿ.ವಿ. ಯಲ್ಲಿ ಬರುತ್ತಿದೆ, ಎಲ್ಲಾ ಕಡೆ ಬರುತ್ತಿದೆ ಎನ್ನುವ ಸುದ್ದಿ ಕೇಳಿಬರುತ್ತಿದೆ. ಇದನ್ನು ಅಕಸ್ಮಾತ್ತಾಗಿ ಮುಖ್ಯಮಂತ್ರಿಗಳಾಗಲೀ ಅಥವಾ ಸರ್ಕಾರದ ಬೇರೆ ಯಾರಾದರೂ ಹೇಳಿದ್ದರೆ, ಬಹುಶಃ ಇದು ಈ ಮನೆಗೆ ಅಪಮಾನ ಮಾಡಿದಂತೆ ಮತ್ತು ಅದು ಪ್ರಿವಿಲೇಜ್ ಸಹಾ ಆಗುತ್ತದೆ. ಆ ಕೆಲಸವಾಗಿದ್ದರೆ, ಅದು ಏನು ಎನ್ನುವ ಬಗ್ಗೆ ತಾವು ಉತ್ತರ ಕೊಡಬೇಕು, ಇದು ಮೊದಲನೆಯದು. ಎರಡನೆಯದಾಗಿ, ಇವತ್ತು ಇಲ್ಲಿ ಬಹಳ ಗಂಭೀರವಾದಂಥ ಆಲಮಟ್ಟಿ ವಿಚಾರವಾಗಿ ಚರ್ಚೆ ಮಾಡಿದೆವು. ತಾವು ಅದಕ್ಕೆ ನಾಲ್ಕು ಗಂಟೆಗೆ ಉತ್ತರ ಕೊಡಿಸುತ್ತೇವೆ ಎಂದು ಹೇಳಿದಿರಿ. ನಾನು ಆ ಮನೆಯ ಬಗ್ಗೆ ಪ್ರಸ್ತಾಪ ಮಾಡುತ್ತಿಲ್ಲ. ಆದರೆ ಈ ಮನೆಯಲ್ಲಿ ಇದನ್ನು ಪ್ರಸ್ತಾಪ ಮಾಡಿದ ಮೇಲೆ, ನೀರಾವರಿ ಸಚಿವರೇ ಇಲ್ಲಿಗೆ ಬಂದು ಉತ್ತರ ಕೊಡಲು ಅಡ್ಡಿ ಇರಲಿಲ್ಲ ಅಥವಾ ಮುಖ್ಯಮಂತ್ರಿಗಳೂ ಉತ್ತರ ಕೊಟ್ಟು ಹೋಗಲು ಏನೂ ಅಡ್ಡಿ ಇರಲಿಲ್ಲ. ಆದರೆ, ಆ ಮನೆಯಲ್ಲಿ ಉತ್ತರ ಕೊಟ್ಟು ಅಯಿತು ಎನ್ನುವ ಸುದ್ದಿಯನ್ನು ಕೇಳಿದ್ದೇನೆ. ಅಂದರೆ, ನನಗೆ ಏಕೋ, ಏನೋ, ಎಲ್ಲೋ ಒಂದು ಕಡೆ ಈ ಮನೆಗೆ ಸಿಗಬೇಕಾದಂಥ ಮಹತ್ವ ಕಡಿಮೆಯಾಗುತ್ತಿದೆ ಎಂದು ಅನ್ನಿಸುತ್ತಿದೆ. ಇದು ಸರಿಹೋಗುತ್ತಿಲ್ಲ. ಇದಕ್ಕೆ ಸರ್ಕಾರದವರೇನಾದರೂ ಬಿಗಿಯಾದ ಕ್ರಮ ಮತ್ತು ಸರಿಯಾದ ನಿಲುವನ್ನು ತೆಗೆದುಕೊಳ್ಳುವಿರಾ? ಸಿಬಿಐಗೆ ಕೊಡುತ್ತೇವೆ ಎಂದು ನೀವು ಹೇಳಿರುವುದು ನಿಜವೋ, ಅಲ್ಲವೋ? ಅದಕ್ಕೆ ಸರಿಯಾದಂಥ ಒಂದು ಮಾಹಿತಿಯನ್ನು ಈ ಮನೆಗೆ ಒದಗಿಸಿಕೊಟ್ಟರೆ ನಾವು ಚರ್ಚೆ ಮಾಡುವುದಕ್ಕೂ ಅನುಕೂಲವಾಗುತ್ತದೆ ಮತ್ತು ಸಭಾಧ್ಯಕ್ಷರ ಗಮನಕ್ಕೆ ತರಲೂ ಅನುಕೂಲವಾಗುತ್ತದೆ ಎಂದು ಸನ್ಮಾನ್ಯ ಸಚಿವರಿಗೆ ಹೇಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಇದು still propriety of the House. ಆ ಚರ್ಚೆ ಸಂಪೂರ್ಣವಾಗಿಲ್ಲ. ತಾವು ಅದನ್ನು ನಿಯಮ 69ರ ಕೆಳಗೆ ರೆಫರ್ ಮಾಡಿದ್ದೀರಿ, ನಾವು ಇನ್ನೂ ಚರ್ಚೆ ಮಾಡಬೇಕಾದುದು ಬಹಳ ವಿಷಯಗಳಿದ್ದಾಗ, ಅಕಸ್ಮಾತ್ ಅಂಥ ಹೇಳಿಕೆಗಳನ್ನು ಕೊಟ್ಟರೆ, ಅದು ಇಡೀ ಈ ಸಭೆಗೆ ಘನತೆ ಇರುವಂಥ ತೀರ್ಮಾನವಾಗುವುದಿಲ್ಲ. ಈ ವಿಷಯದ ಚರ್ಚೆ ಇನ್ನೂ ಮುಗಿದಿಲ್ಲ. ನಾವು ತಮಗೆ ಪ್ರಿಲಿಮಿನರಿ ಬ್ರೀಫಿಂಗ್ ಮಾಡಿದ್ದೇವೆ, ಬೇಕಾದಷ್ಟು ವಿಷಯಗಳು ಹೇಳುವುದಿದೆ ಎಂದು ಹೇಳಿದ್ದೇವೆ. ಸಿಬಿಐಗೆ ಕೊಡುವುದಾದರೂ

ಕೂಡ what are the points of reference? ಏನಿರಬೇಕು, ಯಾರ್ಯಾರು ಅದರಲ್ಲಿ ಒಳಗೊಳ್ಳಬೇಕು ಎನ್ನುವುದನ್ನೆಲ್ಲಾ ಇಲ್ಲಿ ಚರ್ಚೆ ಮಾಡದೆ, ಅವರು ಅಕಸ್ಮಾತ್ ವಿಕಾವಿಕೀ ತೀರ್ಮಾನ ತೆಗೆದುಕೊಂಡಿದ್ದರೆ ತಾವು ಸರ್ಕಾರಕ್ಕೆ ಒಂದು ಎಚ್ಚರಿಕೆಯನ್ನು ಕೊಡಬೇಕಾಗುತ್ತದೆ. ಇಲ್ಲದಿದ್ದರೆ, ಈ ಸದನದ ಗೌರವವೇನೂ ಉಳಿಯುವುದಿಲ್ಲ. ಎರಡನೆಯದಾಗಿ, ಶಾಸನಸಭೆಗಳು ನಡೆಯಬೇಕಾದರೆ, ಜನರಿಂದ ಆರಿಸಿ ಬಂದ ವಿಧಾನಸಭಾ ಸದಸ್ಯರಿಗೆ, ಅದರಲ್ಲೂ ಸಹ ಬಜೆಟ್ ಸೆಷನ್‌ನಲ್ಲಿ ವಿಶೇಷವಾದ ಗೌರವವನ್ನು ಉಳಿಸಿಕೊಡುವಂಥ ಕೆಲಸವನ್ನು ಮಾಡಬೇಕು. ಇಲ್ಲಿ ನಾವು ಯಾವುದೋ ವಿಷಯವನ್ನು ರೈಸ್ ಮಾಡಿದಾಗ, ಆ ಬಗ್ಗೆ ಕೌನ್ಸಿಲ್‌ನಲ್ಲಿ ಹೇಳಿಕೆ ಕೊಡುತ್ತಾ ಕುಳಿತುಕೊಂಡರೆ, ಎಂ.ಎಲ್.ಎ. ಗಳಾಗಿರುವ ನಮಗ್ಯಾರಿಗೂ ಆಸಕ್ತಿಯೇ ಇಲ್ಲವೇನೋ ಎಂದು ಸಾರ್ವಜನಿಕವಾಗಿ ಮಾತನಾಡುವಂಥ ಸ್ಥಿತಿ ನಿರ್ಮಾಣವಾಗುತ್ತದೆ. ನಾನು ಸ್ವಲ್ಪ ಮಾತನಾಡಬೇಕಾಗಿದೆ. ಕೌನ್ಸಿಲ್‌ನಲ್ಲಿ ಏನಾಗುತ್ತಿದೆ ಎಂದು ತಮ್ಮನ್ನು ಕೇಳಬೇಕಾಗುತ್ತದೆ. ಅಲ್ಲಿ ಪ್ರತಿವಾರ ಒಂದು ಫಂಕ್ಷನ್ ಆಗುತ್ತದೆ, ಯಾರನ್ನು ಕರೆಯುವುದಿಲ್ಲ, Every week, there is a function in the Council. Every week there is a publicity, propaganda for Council. ಹಾಗಾದರೆ ವಿಧಾನಸಭೆಯ ಗೌರವವೇನು? ಏಕೆ ನಾವುಗಳೆಲ್ಲಾ ಜನಗಳಿಂದ ಆರಿಸಿ ಬಂದು ಇಲ್ಲಿ ಕುಳಿತುಕೊಂಡು ಮಾತನಾಡಬೇಕು ಎಂಬುದು ನನಗೆ ಅರ್ಥವಾಗುವುದಿಲ್ಲ. ಇದನ್ನು ಸನ್ಮಾನ್ಯ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್, ತಾವು ಮತ್ತು ಆ ಸದನದ ಘನತೆವೆತ್ತ ಚೇರ್‌ಮೆನ್‌ರವರು ಕುಳಿತು ಚರ್ಚೆ ಮಾಡಬೇಕು. ಅವರು ಕಾರ್ಯಕ್ರಮಗಳನ್ನು ಮಾಡಲು ನಾವ್ಯಾರೂ ಅಡ್ಡಿ ಮಾಡುವುದಿಲ್ಲ. ಅದು ಕೌನ್ಸಿಲ್‌ಗೆ ಬಿಟ್ಟದ್ದು. ಅವರದೇ ಬಜೆಟ್ ಇರುತ್ತದೆ, ಆ ಬಜೆಟನ್ನು ಇಲ್ಲಿ ನಾವು ಪಾಸ್ ಮಾಡಿರುತ್ತೇವೆ. ಪ್ರತಿವಾರ ಏನಾದರೊಂದು ಸಬ್ಜೆಕ್ಟ್ ತೆಗೆದುಕೊಂಡು, ಒಂದೊಂದು ಕಾರ್ಯಕ್ರಮ ಮಾಡುವುದು, ನ್ಯೂಸ್ ಮಾಡುವುದಕ್ಕೆ ವಿಧಾನ ಪರಿಷತ್ತನ್ನು ಬಳಸುವಂಥ ಸ್ಥಿತಿ ನಿರ್ಮಾಣವಾಗಿದೆ. ಅವತ್ತು ತಾವು ನಮಗೆ, ಹನ್ನೆರಡು ಗಂಟೆಗೆ ಬನ್ನಿ ಸಭೆಗೆ, ವಿಧಾನ ಪರಿಷತ್ತಿನಲ್ಲಿ ಕಾರ್ಯಕ್ರಮವಿದೆ ಎಂದು ಆವತ್ತು ಹೇಳಿದಿರಿ. ಆದರೆ ಅದಕ್ಕೆ ನಮಗ್ಯಾರಿಗೂ ಒಂದು ಇನ್ವಿಟೇಷನ್ ಇಲ್ಲ. ಸನ್ಮಾನ್ಯ ಗವರ್ನರ್‌ರವರು ಬರುತ್ತಾರೆ. ಕೌನ್ಸಿಲ್‌ಗೆ ಗವರ್ನರ್ ಹೋಗುವುದು ಬಹಳ ವಿರಳವಾದ ಸಂದರ್ಭಗಳಲ್ಲಿ, ಅಂಥ ಕಾರ್ಯಕ್ರಮಕ್ಕೆ ಒಬ್ಬ ಎಂ.ಎಲ್.ಎ. ಗಾದರೂ ಅದರ ಇನ್ವಿಟೇಷನ್ ಇಲ್ಲ, ಒಬ್ಬ ಫ್ಲೋರ್ ಲೀಡರ್‌ಗೆ ಇನ್ವಿಟೇಷನ್ ಇಲ್ಲ, ಈ ಸ್ಥಿತಿಯೇ ಮುಂದುವರೆದುಕೊಂಡು ಹೋದರೆ ವಿಧಾನಸಭೆಯ ಗೌರವೇನಾಗುತ್ತದೆ ಎನ್ನುವುದನ್ನು ನಾನು ತಮ್ಮ ವಿವೇಚನೆಗೆ ಬಿಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಒಳ್ಳೆಯ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಶಾಸನಸಭೆ ಎಂದರೆ ಅದು ವಿಧಾನ ಪರಿಷತ್ತು ಮತ್ತು ವಿಧಾನಸಭೆಯನ್ನು ಕಲೆತಿರತಕ್ಕಂಥಾದ್ದು. ಆದ್ದರಿಂದ, ಅದರಲ್ಲಿ ಒಂದು ಹೆಚ್ಚು, ಒಂದು ಕಡಿಮೆ ಎನ್ನುವ ಪ್ರಶ್ನೆಯೇ ಇಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಅಲ್ಲಿಯ ಸಭಾನಾಯಕರು. ಈ ಒಂದು ಸಮ್ಮಿಶ್ರ ಸರ್ಕಾರದ ಅನುಭವದ ಹಿನ್ನಲೆಯಲ್ಲಿ ಒಂದು ವಿಶಿಷ್ಟವಾದಂಥ ಪರಿಸ್ಥಿತಿ ಮತ್ತು ಇಲ್ಲಿಯವರೆಗೆ ಪ್ರಯೋಗಕ್ಕೆ ಒಳಗಾಗದೇ ಇರತಕ್ಕಂಥ ಒಂದು ಸನ್ನಿವೇಶ ಕರ್ನಾಟಕ ರಾಜ್ಯದಲ್ಲಿ ನಿರ್ಮಾಣವಾಗಿದೆ.

ಆ ಕಾರಣಕ್ಕಾಗಿ ಮಂತ್ರಿಮಂಡಲವನ್ನು ವಿಸ್ತರಣೆ ಮಾಡಿ ಎಲ್ಲರಿಗೂ ಜವಾಬ್ದಾರಿಯನ್ನು ಕೊಡುವಂಥ ಪ್ರಯತ್ನವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಿದ್ದಾರೆ. ಅದು ಪ್ರಾಯಶಃ ಸ್ವಲ್ಪ ದಿವಸದಲ್ಲಿ ಆಗಬಹುದು. ಆಗ ವಿಧಾನ ಪರಿಷತ್ತಿನಲ್ಲಿರುವವರಿಗೂ ಕೂಡ ಅವಕಾಶ ಸಿಕ್ಕಾಗ ಅಲ್ಲಿ ಒಂದು ಪ್ರಶ್ನೆ ಬೇರೆ ಆಗುತ್ತದೆ. ಈಗ ಅವರು ಅಲ್ಲಿ ಸಭಾನಾಯಕರಾಗಿರುವುದರಿಂದ ಅಲ್ಲಿ ಪ್ರಶ್ನೆ ಉದ್ಭವವಾದಂಥ ಸಂದರ್ಭದಲ್ಲಿ ಅಲ್ಲಿ ಮಾತುಕತೆಗಳು ಚರ್ಚೆಗೆ ಬಂದಂಥ ಸಂದರ್ಭದಲ್ಲಿ ಅವರು ತತ್ಕ್ಷಣದಲ್ಲೇ ಸರ್ಕಾರದ ಪರವಾಗಿ ಉತ್ತರವನ್ನು ಕೊಡಲೇಬೇಕಾಗುತ್ತದೆ. ಆ ಕಾರಣದಿಂದ ಉತ್ತರ ಕೊಟ್ಟಿದ್ದಾರೆ. ಆ ಮನೆಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ ಎನ್ನುವ ಕಾರಣಕ್ಕಾಗಿ ಈ ಮನೆಯನ್ನು ನಾವು ಅಲಕ್ಷ್ಯ ಮಾಡಿದ್ದೇವೆ ಎನ್ನುವ ಪ್ರಶ್ನೆ ಉದ್ಭವವಾಗುವುದಿಲ್ಲ ಮತ್ತು ಎಲ್ಲರಿಗೂ ಗೊತ್ತಿದ್ದಂತೆ, ಈ ಮನೆಗೆ ಇರತಕ್ಕಂಥ ವಿಶಿಷ್ಟತೆ ಈ ಮನೆಗೆ ಇರುವಂಥ ಅಂತರ್ಗತವಾದಂಥ ಶಕ್ತಿ ಬೇರೆ ಯಾವ ಮನೆಗೂ ಇಲ್ಲ. ಇದು ನೇರವಾಗಿ ಜನತೆಯಿಂದ ಆರಿಸಿ ಬಂದಂಥದ್ದು. ಇಲ್ಲಿಂದ ಆರಿಸಿ ಹೋಗಿರತಕ್ಕಂಥವರು ಮತ್ತು ಬೇರೆ ಬೇರೆ ಕಡೆಯಿಂದ ಬಂದಿರತಕ್ಕಂಥವರು ಅಲ್ಲಿ ವಿಧಾನ ಪರಿಷತ್ತಿನಲ್ಲಿ ಇರುತ್ತಾರೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮೇಲ್ಮನೆಯ ಸದಸ್ಯರಾಗಿದ್ದಂಥ ಸಂದರ್ಭದಲ್ಲಿ ಹಿಂದೆ ಮಸೂದೆಗಳನ್ನು ಅಲ್ಲಿ ಚರ್ಚೆ ಪ್ರಾರಂಭ ಮಾಡಿದಾಗ ಈ ವಿಚಾರ ಚರ್ಚೆಗೆ ಬಂತು. ನೀವು ವಿಧಾನ ಪರಿಷತ್ತಿನಲ್ಲಿ ಅದನ್ನು ಮಂಡಿಸಿ ಮತ್ತೆ ವಿಧಾನಸಭೆಯಲ್ಲಿ ತರುತ್ತೀರಿ ಎನ್ನುವ ವಿಷಯಗಳು ಚರ್ಚೆ ಆದ ಮೇಲೆ ಉಭಯಸದನಗಳಲ್ಲಿ ಯಾವುದಾದರೂ ಒಂದು ಸದನದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಬಹುದು ಎನ್ನತಕ್ಕಂಥ ಮಾತು ಬಂತು. ಈಗಾಗಲೇ ಮಾನ್ಯ ಮಾಧುಸ್ವಾಮಿಯವರು ಕೂಡ ಒಪ್ಪಿದ್ದಾರೆ. ಹಣಕಾಸಿಗೆ ಸಂಬಂಧಪಟ್ಟಂತೆ ವಿಧಾನ ಪರಿಷತ್ತಿನ ಅಧಿಕಾರದ ಇತಿಮಿತಿ ಏನು ಎನ್ನತಕ್ಕಂಥದ್ದು ನಮಗೆ ಗೊತ್ತಿದೆ. ಒಂದರ್ಥದಲ್ಲಿ ನಿಲುವಳಿ ಸೂಚನೆಯ ಪ್ರಸ್ತಾಪವೂ ಕೂಡ ಅಲ್ಲಿ ಇರಬಾರದು. ಆದರೆ ನಮ್ಮದೇ ಆದಂಥ ಕೆಲವು ನಿಯಮಾವಳಿಗಳನ್ನು ರಚನೆ ಮಾಡಿಕೊಂಡಿರತಕ್ಕಂಥ ಸಂದರ್ಭದಲ್ಲಿ ಆ ನಿಲುವಳಿ ಸೂಚನೆಯನ್ನು ಅಲ್ಲಿ ಕೊಟ್ಟಿದ್ದೇವೆ. ಅಂಥ ಪರಮಾಧಿಕಾರವನ್ನು ಅಲ್ಲಿ ಸೃಷ್ಟಿ ಮಾಡಿಕೊಂಡಿದ್ದಾರೆ. ರಾಜ್ಯಸಭೆಯಲ್ಲಿ ನಿಲುವಳಿ ಸೂಚನೆಗೆ ಅವಕಾಶವಿಲ್ಲ. ಅದು ಸಂವಿಧಾನ ಮೂಲಕವಾಗಿಯೇ ಏರ್ಪಾಡಾಗಿರತಕ್ಕಂಥ ಹಿರಿಯರ ಮನೆ ಆಗಿದ್ದರೂ ಕೂಡ ಅಲ್ಲಿ Special Mention ಎನ್ನತಕ್ಕಂಥ ವಿಚಾರವನ್ನು ಇಟ್ಟುಕೊಂಡಿದ್ದಾರೆ. ಆ ಕಾರಣಕ್ಕಾಗಿ Special Mention ಎನ್ನತಕ್ಕಂಥದ್ದನ್ನು ಕೂಡ ಆ ನಿಯಮಾವಳಿಯಲ್ಲಿ ತರಬೇಕೆನ್ನುವಂಥ ವಿಚಾರವೂ ಕೂಡ ಚರ್ಚೆ ಈಗ ಆಗುತ್ತಾ ಇದೆ. ಈ ಸಂದರ್ಭದಲ್ಲಿ ಈ ಸರ್ಕಾರದ ಮೂಲಕವಾಗಿ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮತ್ತು ಹಿರಿಯ ಎಲ್ಲಾ ನನ್ನ ಸದನದ ಸದಸ್ಯರಿಗೆ ವಿನಂತಿ ಮಾಡಿಕೊಳ್ಳುತ್ತೇನೆ ಮತ್ತು ಅದರಲ್ಲಿ ಹೇಳಲು ಇಚ್ಛೆಪಡತಕ್ಕಂಥದ್ದು ಇಷ್ಟೆ, ನಾವು ಇದನ್ನು ಅತ್ಯಂತ ಗೌರವದಿಂದ ಕಾರಣತಕ್ಕಂಥ ಮನೆಗಳು ಇವು. ವಿಧಾನಸಭೆ ಮತ್ತು ವಿಧಾನ ಪರಿಷತ್ತು ಎರಡೂ ಕೂಡ ಬಹಳ ಮುಖ್ಯವಾಗಿರತಕ್ಕಂಥದ್ದು, ಇದರ ಬಗ್ಗೆ ತಾವು ಬಹಳ ಸೂಕ್ಷ್ಮವಾಗಿ ಯೋಚನೆ ಮಾಡಬೇಕಾಗಿದೆ. ಇತ್ತೀಚಿನ ದಿನಮಾನಗಳಲ್ಲಿ ಆಂಧ್ರಪ್ರದೇಶದಲ್ಲಿಯೂ ಕೂಡ ವಿಧಾನ ಪರಿಷತ್ತು ಅನ್ನು ಪುನರ್‌ಸ್ಥಾಪನೆ ಮಾಡಬೇಕೆನ್ನತಕ್ಕಂಥ ಪ್ರಸ್ತಾಪ ಕೂಡ ಇದೆ. ಈ ವಿಧಾನ ಪರಿಷತ್ತುಗಳು ಎಲ್ಲೆಲ್ಲಿವೆ, ಅವು ಅಲ್ಲಿಯ ರಾಜ್ಯದ ಕಾನೂನಿನ ಅಡಿಯಲ್ಲಿ ಇದು ಆಗಬಾರದು, ಅದು ರಾಜ್ಯಸಭೆ

ನಿರ್ಮಾಣ ಆದಂತೆ ಸಂವಿಧಾನಾತ್ಮಕವಾಗಿ ಆಗಬೇಕು ಎನ್ನುವಂಥ ವಿಚಾರವೂ ಕೂಡ ಪಾರ್ಲಿಮೆಂಟಿನಲ್ಲಿ ಚರ್ಚೆ ಆಗಿರತಕ್ಕಂಥದ್ದನ್ನು ನಾವು ಕಂಡಿದ್ದೇವೆ. ಉಭಯ ಸದನಗಳ ಬಗ್ಗೆ ಭಿನ್ನಾಭಿಪ್ರಾಯಗಳನ್ನು ಇಟ್ಟುಕೊಳ್ಳತಕ್ಕಂಥದ್ದಲ್ಲ, ನಿಜವಾದಂಥ ಶಕ್ತಿ ಇರತಕ್ಕಂಥದ್ದು ಕೆಳಮನೆಗೆ ಎನ್ನುವುದನ್ನು ಮೇಲ್ಮನೆಯವರೂ ಕೂಡ ಅನೇಕ ಸಂದರ್ಭದಲ್ಲಿ ಒಪ್ಪಿರುವುದನ್ನು ನಾವು ಕಂಡಿದ್ದೇವೆ. ಇನ್ನು ಎರಡನೆಯ ವಿಚಾರ ಸಿ.ಬಿ.ಐ. ಎನ್‌ಕ್ವೆಯರಿ ಆಗಿರತಕ್ಕಂಥದ್ದನ್ನು ಪ್ರಕಟಗೊಳಿಸಿದ್ದಾರೆ ಎನ್ನುವಂಥದ್ದನ್ನು ತಾವು ಹೇಳಿದಿರಿ....

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ನಾವು ಮೊದಲಿಂದಲೂ ನೋಡುತ್ತಿದ್ದೇವೆ, ಇತ್ತೀಚಿನ ದಿನಗಳಲ್ಲಿ ಈ ಸದನವನ್ನು ಕಡೆಗಾಣಿಸುತ್ತಿದ್ದಾರೆ. ಮೊನ್ನೆಯ ದಿನ 100 ಸಭೆಗಳು ಆಗಿದ್ದರ ಬಗ್ಗೆ ಮಾನ್ಯ ರಾಜ್ಯಪಾಲರನ್ನು ಕರೆದು ಒಂದು ಸನ್ಮಾನ ಸಮಾರಂಭ ಆ ಮನೆಯಲ್ಲಿ ಮಾಡಿದರು. ನಮ್ಮ ಸದನ ಇಲ್ಲಿ ನಡೆಯುತ್ತಿದೆ. ಇಲ್ಲಿ 225 ಜನ ಶಾಸಕರು ಇದ್ದಾರೆ. ಇವರನ್ನು ಕರೆದು ಮಾತುಕತೆ ಆಡಿ ನಾವೆಲ್ಲಾ ಒಟ್ಟಿಗೆ ಸೇರಿ ಒಂದು ಸಮಾರಂಭ ಮಾಡೋಣ ಎಂದು ಹೇಳಬಹುದಾಗಿತ್ತು. ಸಮಾರಂಭದ ಬಗ್ಗೆ ಯಾರೊಬ್ಬರನ್ನು ಕರೆಯುತ್ತಾರೆ, ಯಡಿಯೂರಪ್ಪನವರನ್ನು ಕರೆದರೆ ಮುಗಿಯಿತೇ? ಇಲ್ಲಿ ಅನೇಕ ವಿರೋಧ ಪಕ್ಷದ ನಾಯಕರು ಇದ್ದಾರೆ, 224 ಜನ ಸದಸ್ಯರು ಇದ್ದಾರೆ, ಅವರು ಯಾವ ಪಕ್ಷದವರೇ ಇರಲಿ, ಐತಿಹಾಸಿಕವಾದಂಥ ಸಮಾರಂಭಕ್ಕೆ ಅವರದೇ ಆದಂಥ ಒಂದು ಮಡಿವಂತಿಕೆ ಮಾಡಿಕೊಂಡು ಅಲ್ಲಿಯೇ ಒಂದು ಸಮಾರಂಭ ನಡೆಸಿದ್ದಾರೆ. ಅಲ್ಲಿ ರಾಜ್ಯಪಾಲರ ಭಾಷಣ ಇರುವುದು ನಮಗೆ ಗೊತ್ತೇ ಇಲ್ಲ. ಈ ಸದನದಲ್ಲಿ ಸಭೆ ನಡೆಯುತ್ತಿದೆ. ಅಲ್ಲಿ ಚರಿತಾರ್ಹವಾದ ಸಮಾರಂಭ ನಡೆಯುತ್ತಿದ್ದು ಆ ಸಮಾರಂಭದಲ್ಲಿ ಭಾಗವಹಿಸತಕ್ಕಂಥ ವ್ಯವಸ್ಥೆ ನಮಗೆ ಇಲ್ಲವೇ ಇಲ್ಲ. ಇದು ನಿಜಕ್ಕೂ ಈ ಸದನದ ಬಗ್ಗೆ ಅವರಿಗೆ ಇರತಕ್ಕಂಥ ತೀವ್ರವಾದಂಥ ಅಗೌರವ. ಇದು ಅತ್ಯಂತ ಶೋಚನೀಯ ವಿಚಾರ. ಈ ಸದನವನ್ನು ಎತ್ತಿಹಿಡಿಯತಕ್ಕಂಥದ್ದು ಈ ಸದನದ ಗೌರವವನ್ನು ಕಾಪಾಡತಕ್ಕಂಥದ್ದು ಅಧ್ಯಕ್ಷರಾದ ತಮಗೆ ಸೇರಿರತಕ್ಕಂಥದ್ದು. ಜೊತೆಯಲ್ಲಿ ಈ ಸದನಕ್ಕೆ ಹೆಚ್ಚಿನ ಶಕ್ತಿ ಇರತಕ್ಕಂಥದ್ದು. ಮಾನ್ಯ ಮುಖ್ಯಮಂತ್ರಿಗಳು ಆ ಸದನದಲ್ಲಿ ಹೇಳಿಕೆ ಕೊಟ್ಟಿರತಕ್ಕಂಥದ್ದು ಈ ಸದನದ ಹಕ್ಕಿಗೆ ಚ್ಯುತಿಯಾಗುತ್ತದೆ. ಈ ಸದನದ ಹಕ್ಕಿಗೆ ನೇರವಾಗಿ ಚ್ಯುತಿಯಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಕಾರಣ ಏನೆಂದರೆ, ಈ ಸದನ ಆರಂಭ ಆದ ತಕ್ಷಣ ಮಾನ್ಯ ಮುಖ್ಯಮಂತ್ರಿಗಳು ಬಂದು ಆಲಮಟ್ಟಿ ಬಗ್ಗೆ ಇಲ್ಲಿ ಹೇಳಿಕೆ ಕೊಡಬೇಕಾಗಿತ್ತು. ಅದು ಕೊಡದೆ ಆ ಸದನದಲ್ಲಿ ಹೇಳಿಕೆ ಕೊಟ್ಟರು. ಈ ಸದನವನ್ನು ಕಡೆಗಾಣಿಸಿ ಇನ್ನೂ 4 ಗಂಟೆಯ ಮೇಲೆ ಬಂದು ಉತ್ತರ ಕೊಡುತ್ತೇನೆಂದು ಹೇಳಿದರೆ ಈ ಸದನಕ್ಕೆ ಏನು ಗೌರವ ಇರುತ್ತದೆ? ಪಶ್ಚಿಮ ಬಂಗಾಳದಲ್ಲಿ ವಿಧಾನ ಪರಿಷತ್ತು ಇಲ್ಲ. ತಮಿಳುನಾಡಿನಲ್ಲಿ ವಿಧಾನ ಪರಿಷತ್ತು ಇಲ್ಲ. ನಾವು ಏನೂ ಇದರ ಬಗ್ಗೆ ಚಕಾರ ಎತ್ತಲಿಲ್ಲ. ಅದಿರಲಿ, ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಈ ಸದನ, ಅದರಲ್ಲೂ ಚುನಾಯಿತ ಪ್ರತಿನಿಧಿಗಳ ಸದನ, ಈ ಸದನಕ್ಕೆ ಇರುವಂಥ ವ್ಯಕ್ತಿತ್ವ, ಶಕ್ತಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸಂವಿಧಾನದಲ್ಲಿ ಈ ಸದನಕ್ಕೆ ಮಹತ್ತರವಾದ ಶಕ್ತಿ ಇದೆ. ಅದನ್ನು ಕಾಪಾಡಿ ಉಳಿಸತಕ್ಕಂಥ ಭಾರ ನಿಮ್ಮದು. ಆದರೆ ಮಾನ್ಯ ಮುಖ್ಯಮಂತ್ರಿಗಳು ನಿಜವಾಗಿಯೂ ಈ ಸದನವನ್ನು ಅಗೌರವದಲ್ಲಿ ನೋಡಿದ್ದಾರೆ ಎನ್ನುವುದನ್ನು ತಮ್ಮ ಮೂಲಕ ಹೇಳುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ತಮ್ಮಲ್ಲಿ ಅರಿಕೆ ಮಾಡಿಕೊಂಡಂತೆ ವಿಧಾನ ಪರಿಷತ್ತು ಎನ್ನತಕ್ಕಂಥದ್ದು, ವಿಧಾನಸಭೆ ಎನ್ನತಕ್ಕಂಥದ್ದು ಇವೆರಡೂ ಕೂಡ ಶಾಸನ ಸಭೆಗಳೇ ಆಗಿವೆ. ಆ ಕಾರಣಕ್ಕಾಗಿಯೇ ನಾವು ಆ ಮನೆಯಲ್ಲಿ ಪ್ರಸ್ತಾಪ ಮಾಡಿದ್ದೇವೆ ಎನ್ನುವ ಕಾರಣಕ್ಕೆ ಈ ಮನೆಯನ್ನು ಗೌರವದಿಂದ ಕಂಡಿಲ್ಲ ಎನ್ನುವ ಪ್ರಶ್ನೆ ಉದ್ಭವವಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಅಲ್ಲಿ ಹೇಳಿಕೆ ಕೊಟ್ಟಿರತಕ್ಕಂಥದ್ದು. ಆ ಸದನದಲ್ಲಾದರೂ ಹೇಳಿಕೆ ಕೊಡಬಹುದು ಈ ಸದನದಲ್ಲಾದರೂ ಹೇಳಿಕೆ ಕೊಡಬಹುದು. ಇದು ಹಕ್ಕುಚ್ಯುತಿಯಂತೂ ಖಂಡಿತವಾಗಿ ಆಗಲಿಕ್ಕೆ ಸಾಧ್ಯವೇ ಇಲ್ಲ. ಹಕ್ಕುಚ್ಯುತಿ ಆಗುವುದಿಲ್ಲ. ಏಕೆಂದರೆ ನಾವು ಒಪ್ಪಿತವಾಗಿರುವಂಥ ವಿಧಾನ ಪರಿಷತ್ತು. ಇದೇ ವಿಧಾನಸಭೆ ತಾನು ಕಾನೂನನ್ನು ಮಾಡುವುದರ ಮೂಲಕವಾಗಿ ವಿಧಾನ ಪರಿಷತ್ತನ್ನು ನಿರ್ಮಾಣ ಮಾಡಿದೆ. ಸಂವಿಧಾನ ರಾಜ್ಯಸಭೆಯನ್ನು ನಿರ್ಮಾಣ ಮಾಡಿದೆ, ಆದರೆ ವಿಧಾನ ಪರಿಷತ್ತನ್ನು ನಿರ್ಮಾಣ ಮಾಡುವುದಕ್ಕೆ ಈ ವಿಧಾನಸಭೆ ಕಾನೂನನ್ನು ಮಾಡಿದೆ. ಇಲ್ಲಿ ಕಾನೂನು ಮಾಡಿ ಇಲ್ಲಿ ಅನೇಕ ವಿಚಾರಗಳು ಚರ್ಚೆಗೆ ಒಳಪಡುವುದಿಲ್ಲ ಮತ್ತು ಅನೇಕ ವಿದ್ವಾಂಸರಾದವರು, ಕಲಾವಿದರಾದವರು ಹಿರಿಯರಾದಂಥವರು ರಾಜಕಾರಣದಲ್ಲಿ ಅನುಭವ ಇರತಕ್ಕಂಥವರು ಈ ಚುನಾವಣೆಯ ಗಡಿಬಿಡಿಯಲ್ಲಿ ಗೆದ್ದುಬರತಕ್ಕಂಥದ್ದು ಬಹಳ ಕಷ್ಟ ಆಗಬಹುದು, ಇಲ್ಲಿ ಬರುವಂಥ ವಿಷಯಗಳೇ ಬೇರೆ, ನಾವು ಕಾನೂನನ್ನು ಮಾಡುವಂಥ ಸಂದರ್ಭಗಳಲ್ಲಿ ಶಾಸಕರಿಗೆ ಬೇರೆ ಬೇರೆ ಗುರುತರವಾದಂಥ ಜವಾಬ್ದಾರಿಗಳು ಇರುತ್ತವೆ, ಆ ಕಾರಣಕ್ಕಾಗಿ ಹಿರಿಯರ ಮನೆ ಅಥವಾ ಮೇಲ್ಮನೆ ಎನ್ನತಕ್ಕಂಥದ್ದು ಇರಲಿ ಎನ್ನುವ ಕಾರಣಕ್ಕಾಗಿಯೇ ವಿಧಾನ ಪರಿಷತ್ತನ್ನು ನಮ್ಮವರೆಲ್ಲರೂ ವಿವೇಕಯುತವಾಗಿ ಯೋಚನೆಯನ್ನು ಮಾಡಿ ನಿರ್ಮಾಣ ಮಾಡಿ ಅವರನ್ನೂ ಕೂಡ ನಾವು ಶಾಸಕರು ಎಂದು ಕರೆಯುತ್ತೇವೆ. "Legislators" ಎನ್ನುವ ಪದವನ್ನು ಬಳಸುತ್ತೇವೆ. ಇದರ ಬಗ್ಗೆ ಹಿಂದೆ ಇಂಥದ್ದೇ ಒಂದು ಆಗಿ ವಿಧಾನ ಪರಿಷತ್ತಿನ ಸದಸ್ಯರು ಶಾಸಕರು ಅಲ್ಲ ಎನ್ನುವಂಥ ರೀತಿಯಲ್ಲಿ ಚಿಕ್ಕಮಗಳೂರಿನ ಜಿಲ್ಲಾಧಿಕಾರಿ ಅರ್ಥೈಸಿದ್ದ. ಆ ಕಾರಣಕ್ಕಾಗಿಯೇ ನಿಮ್ಮನ್ನು ಸಭೆಗೆ ಕರೆಸಿಲ್ಲ ಎನ್ನುವ ಮಾತು ಆಯಿತು. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಆ ಸಭೆಯಲ್ಲಿ ಇದ್ದಾಗ ಆ ಜಿಲ್ಲಾಧಿಕಾರಿಯನ್ನು ವಿಧಾನ ಪರಿಷತ್ತಿಗೆ ಕರೆಸಿ ಆತನಿಗೆ ಖಂಡನೆಯ ವಾಗ್ದಂಡನೆಯನ್ನು ಕೊಟ್ಟಿರತಕ್ಕಂಥ ಉದಾಹರಣೆ ಕೂಡ ಇದೆ. ಆ ಕಾರಣಕ್ಕಾಗಿ ನಾವು ಅವರನ್ನು, ಶಾಸಕರನ್ನಾಗಿ ಪರಿಗಣಿಸಿದಾಗ ವಿಧಾನ ಪರಿಷತ್ತು ಮತ್ತು ಸಭೆ ಕರೆದು ಇದನ್ನು ನಾವು ವಿಧಾನಮಂಡಲ ಎಂದು ಕರೆಯುತ್ತೇವೆ. ಆ ದೃಷ್ಟಿಯಿಂದ ನೀವು ಹೇಳಿರತಕ್ಕಂಥದ್ದು ಹಕ್ಕುಚ್ಯುತಿಯಾಗುವುದಿಲ್ಲ. ಈ ಸದನವನ್ನು ನಾವು ಅಗೌರವದಿಂದ ಕಾರಣತಕ್ಕಂಥ ಪ್ರಶ್ನೆ ಬರುವುದಿಲ್ಲ. ಮುಖ್ಯ ಮಂತ್ರಿಗಳಾಗಿರತಕ್ಕಂಥವರೂ ಕೂಡ ಈ ಸಭೆಯಿಂದಲೇ ಆಗಿರತಕ್ಕಂಥವರು ಆಗಿದ್ದಾರೆ. ಅನೇಕ ಬಾರಿ ಮೇಲ್ಮನೆಯಲ್ಲಿದ್ದಂಥವರೂ ಕೂಡ ಮುಖ್ಯಮಂತ್ರಿಗಳಾಗಿದ್ದಾರೆ. ರಾಜ್ಯಸಭೆಯಲ್ಲಿದ್ದಂಥವರೂ ಕೂಡ ಮುಖ್ಯಮಂತ್ರಿಗಳಾಗಿದ್ದಾರೆ. ಈ ದಿವಸದ ಪ್ರಧಾನಮಂತ್ರಿಗಳೂ ಕೂಡ ರಾಜ್ಯಸಭೆಯ ಸದಸ್ಯರು ಆಗಿದ್ದಾರೆ. ಅಲ್ಲಿ ಸಂವಿಧಾನಾತ್ಮಕವಾದ ರಕ್ಷಣೆ ಇದೆ. ಇಲ್ಲಿ ನಮ್ಮ ಕಾನೂನಿನ ಮೂಲಕ ರಕ್ಷಣೆ ಇದೆ. ಅಲ್ಲಿ ಪಶ್ಚಿಮ ಬಂಗಾಳದಲ್ಲಿ ವಿಧಾನ ಪರಿಷತ್ತು ಇಲ್ಲ, ತಮಿಳುನಾಡಿನಲ್ಲಿ ಇಲ್ಲ ಎನ್ನುವುದಕ್ಕೆ ಬೇರೆ ಬೇರೆ ಕಾರಣಗಳಿವೆ. ಅಲ್ಲಿ ಅವರು ವೈಯಕ್ತಿಕವಾದಂಥ ಕಾರಣಗಳಿಗಾಗಿ ತಮಿಳುನಾಡಿನಲ್ಲಂತೂ ದಿವಂಗತ ಎಂ.ಜಿ. ರಾಮಚಂದ್ರನ್‌ರವರು ಬಹಳ ದೊಡ್ಡ ಪ್ರಭಾವಿಯಾಗಿದ್ದರಿಂದ ಅವರ ವೈಯಕ್ತಿಕವಾದ ನಿಲುವುಗಳ ಮೂಲಕವಾಗಿ ಅದನ್ನು ರದ್ದು

ಮಾಡಿದರು. ಅದೇನೇ ಇರಲಿ, ಬೇರೆ ಸದನದ ಕಲಾಪಗಳ ಬಗ್ಗೆ ಬೇರೆ ಸದನದಲ್ಲಿ ಆಗಿರತಕ್ಕಂಥ ಚರ್ಚೆಯ ಬಗ್ಗೆ ಬರೀ ಕಾನೂನಿನ ದೃಷ್ಟಿಯಿಂದ ಅಲ್ಲ. ಸದಭಿರುಚಿಯ ದೃಷ್ಟಿಯಿಂದಲೂ ಕೂಡ ನಾವು ಚರ್ಚೆಗೆ ಒಳಪಡಿಸಬಾರದು. ನಿಯಮ 329ರಲ್ಲಿ ನೇರವಾಗಿ ಇಂಥ ಮಾತುಗಳನ್ನು ಹೇಳುತ್ತಾರೆ. ಹಿರಿಯರಾದಂಥವರಿಗೆಲ್ಲರಿಗೂ ಕೂಡ ನಮ್ಮದೇ ಆದಂಥ ನಿಯಮ 239ರಲ್ಲಿ ಗೊತ್ತಿದೆ. ಆದರೆ ಅದನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆ ಸಭೆಯ ವಿಚಾರಗಳನ್ನು, ಕಲಾಪಗಳ ವಿಚಾರವನ್ನು ಅಲ್ಲಿ ನಡೆದಿರತಕ್ಕಂಥದ್ದರ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡತಕ್ಕಂಥದ್ದು ಸದಭಿರುಚಿಯೂ ಅಲ್ಲ, ನಮ್ಮ ನಿಯಮಾವಳಿಗೆ ವಿರೋಧವಾಗಿರತಕ್ಕಂಥದ್ದು ಆಗಿದೆ. ಎರಡನೆಯದು, ಅವರು ಇಲ್ಲಿಗೆ ಬಂದು ಚರ್ಚೆಗೆ ಉತ್ತರವನ್ನು 4 ಗಂಟೆಗೆ ಕೊಡುತ್ತೇವೆಂದು ಹೇಳಿಸಿದ್ದೇವೆ. ಖಂಡಿತವಾಗಿ ಉತ್ತರವನ್ನು ಕೊಡುತ್ತಾರೆ. ನನ್ನಲ್ಲಿ ಅದು ರೆಡಿಯಾಗಿರತಕ್ಕಂಥದ್ದು ಇರಬಹುದು. ನಾನೇ ಉತ್ತರವನ್ನು ಹೇಳುವುದಕ್ಕಿಂತಲೂ ಮುಖ್ಯಮಂತ್ರಿಗಳು ಬಂದು ಹೇಳಿದರೆ ಅದಕ್ಕೆ ಭೂಷಣವಾಗುತ್ತದೆ, ಅನೇಕ ವಿಚಾರಗಳು ಚರ್ಚೆಗೆ ಒಳಪಡುತ್ತವೆಂದು ಹೇಳಿ ನಾನು ಖಂಡಿತವಾಗಿಯೂ ಕೂಡ ಇಲ್ಲಿ 4 ಗಂಟೆಗೆ ಇಲ್ಲಿ ಮುಖ್ಯಮಂತ್ರಿಗಳು ಬರುತ್ತಾರೆ, ತಮ್ಮ ಪ್ರಶ್ನೆ ಏನಿದೆ ಅದಕ್ಕೆ ಉತ್ತರವನ್ನು ಕೊಡುತ್ತಾರೆ, ತಾವು ಆ ರೀತಿಯಾಗಿ ಸೂಕ್ಷ್ಮವಾಗಿ ಭಾವಿಸಬಾರದು ಎಂದು ಹೇಳಿ ನಿಮ್ಮಲ್ಲಿ ಅಧ್ಯಕ್ಷರ ಮೂಲಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಂಸದೀಯ ಸಚಿವರು ಹೇಳಿದ ಮಾತಿಗೆ ನನ್ನ ಸಂಪೂರ್ಣ ಒಪ್ಪಿಗೆ ಇದೆ. ಅಲ್ಲಿ ನಡೆದಂಥ ಚರ್ಚೆ ಇಲ್ಲಿ ಆಗಬಾರದು ನಾವು ಪ್ರಸ್ತಾಪ ಮಾಡಬಾರದು ಎರಡೂ ಮನೆಯ ಗೌರವವನ್ನು ಕಾಪಾಡಿಕೊಂಡು ಹೋಗಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಒಂದೇ ವಿಷಯ ಇಲ್ಲಿ ಪ್ರಮುಖವಾಗಿ ಪ್ರಸ್ತಾಪ ಆದಾಗ ಸರ್ಕಾರ ಸ್ವಲ್ಪ ವಿವೇಚನೆಯಿಂದ ಅಲ್ಲಿ ಇಲ್ಲಿ ಒಟ್ಟಾಗಿ ಒಂದೇ ಸಮಯದಲ್ಲಿ ಉತ್ತರವನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದರೂ ಹೆಚ್ಚು ಅನುಕೂಲವಾಗಬಹುದು. ಇನ್ನು ಮುಂದೆ ಹೀಗೆ ಆಗದಂತೆ ಸ್ವಲ್ಪ ಅದರ ಕಡೆಗೆ ವಿಶೇಷವಾದ ಗಮನವನ್ನು ಕೊಡುವುದು ಒಳ್ಳೆಯದು ಎನ್ನುವಂಥದ್ದನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಎರಡನೆಯದು, ಯಾವುದೇ ಕಾರಣಕ್ಕೂ ಎರಡೂ ಮನೆ ನಡೆಯುವಂಥ ಕಾಲದಲ್ಲಿ ಮಂತ್ರಿಗಳಾಗಲೀ, ಮುಖ್ಯಮಂತ್ರಿಗಳಾಗಲಿ ಹೊರಗಡೆ ಇದರ ಬಗ್ಗೆ ಹೇಳಿಕೆಯನ್ನು ಕೊಡುವಂಥದ್ದು ಅದು ಹಕ್ಕುಚ್ಯುತಿಯಾಗುತ್ತದೆ. ದಯವಿಟ್ಟು ಅದರ ಬಗ್ಗೆ ನಾವು ನೋಡಿ ಪ್ರಸ್ತಾಪ ಮಾಡುವವರಿದ್ದೇವೆ. ಅದರ ಬಗ್ಗೆ ಸಹ ಆ ರೀತಿಯಾಗದಂತೆ ತಾವು ಕಟ್ಟಿಚ್ಚರ ವಹಿಸಬೇಕೆನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಬಹಳ ಉತ್ತಮವಾದ ಸಲಹೆಯನ್ನು ವಿರೋಧ ಪಕ್ಷದ ನಾಯಕರು ಕೊಟ್ಟಿದ್ದಾರೆ. ಆದುದರಿಂದ, ಅದರ ಬಗ್ಗೆ ನಾವು ಚರ್ಚೆ ಮಾಡಬೇಕಾದ ಅಗತ್ಯವಿಲ್ಲ. ತಾವು ಹೇಳಿದಂತೆ, ಅಲ್ಲಿ ನಿಯಮಗಳ ಪ್ರಕಾರ, ಇಲ್ಲಿ ಪ್ರಶ್ನೋತ್ತರ ಅವಧಿ 11 ಗಂಟೆಗೆ ಪ್ರಾರಂಭವಾಗುತ್ತದೆಂದು ಹೇಳಿದ ಮೇಲೆ, 12.15 ಗಂಟೆಗೆ ಅಲ್ಲಿ ಪ್ರಾರಂಭವಾಗುತ್ತದೆ. ಇಲ್ಲಿರುವ ಮಂತ್ರಿಗಳು ಅಲ್ಲಿ ಉತ್ತರ ಕೊಡುವುದಕ್ಕೆಂದು 11 ಗಂಟೆಗೆ ನಮ್ಮ ಸಭೆ ಸೇರಿದರೆ, ವಿಧಾನ ಪರಿಷತ್ 12.15 ಗಂಟೆಗೆ ಸೇರುತ್ತದೆ. ಇದರಲ್ಲಿ ಕೂಡ ಅನೇಕ ಬದಲಾವಣೆಗಳನ್ನು ನಿಯಮದಲ್ಲಿ ತರುತ್ತೇವೆ ಎನ್ನುವ ಮಾತಿದೆ. ಹೊರಗಡೆ ಯಾವ ಸಂದರ್ಭದಲ್ಲಿ ಹೇಳಿದ್ದಾರೆನ್ನುವ ಬಗ್ಗೆ ಕೂಡ ಮಾಹಿತಿ

ಲಭ್ಯತೆ ಇಲ್ಲ. ಲಭ್ಯತೆ ಬಂದ ಮೇಲೆ, ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಪ್ರಸ್ತಾಪ ಮಾಡುತ್ತಾರೆ. ಸಹಜವಾಗಿ, ಸಾಮಾನ್ಯವಾಗಿ ಅಧಿವೇಶನ ನಡೆದಿರುವ ಸಂದರ್ಭದಲ್ಲಿ, ಸರ್ಕಾರದ ವಿಚಾರಗಳನ್ನು ಪತ್ರಿಕೆಗಳಿಗೆ ಹೇಳಬೇಕಾದ ಅಗತ್ಯವಿಲ್ಲ. ಆದರೆ, ಅದು ಯಾವ ಸನ್ನಿವೇಶ, ಯಾವ ಪ್ರಶ್ನೋತ್ತರ ಕಾಲ ಎನ್ನುವುದಕ್ಕೆ ಕೌಲ್ ಅಂಡ್ ಷಕ್ದರ್‌ನಲ್ಲಿ ಅನೇಕ ವಿಚಾರಗಳ ಮೇಲೆ ಪ್ರಸ್ತಾಪಿಸಲ್ಪಟ್ಟಿವೆ. ಆದರೂ ಕೂಡ ಇದನ್ನು ನಾವು ಗಮನದಲ್ಲಿಟ್ಟುಕೊಂಡು ತಮ್ಮ ಸಲಹೆಯನ್ನು ಜಾರಿ ಗೊಳಿಸುತ್ತೇವೆ.

7. ವಿತ್ತೀಯ ಕಾರ್ಯಕಲಾಪಗಳು

2004-05ನೇ ಸಾಲಿನ ಆಯವ್ಯಯದ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ

†ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಈ ವರ್ಷದ ಉಳಿದ ಭಾಗ ಸುಮಾರು 8 ತಿಂಗಳಿಗೆ ಸನ್ಮಾನ್ಯ ಅರ್ಥ ಸಚಿವರು ಏನು ಆಯವ್ಯಯ ಮಂಡನೆ ಮಾಡಿದ್ದಾರೆ, ಅದನ್ನು ವಿರೋಧ ಮಾಡುತ್ತಾ, ನನ್ನ ಭಾಷಣವನ್ನು ಆರಂಭ ಮಾಡುತ್ತಿದ್ದೇನೆ. ಭಾಷಣಕ್ಕೆ ನನ್ನನ್ನು ಕರೆದಿದ್ದಕ್ಕೆ ತಮಗೆ ನಾನು ವಂದಿಸುತ್ತೇನೆ. ಮಾನ್ಯ ಅಧ್ಯಕ್ಷರೆ, ಈ ಆಯವ್ಯಯ ಮಂಡನೆಯಲ್ಲಿ, ಅದು ಇಲ್ಲಿಯದಿರಬಹುದು, ಕೇಂದ್ರದ್ದು ಇರಬಹುದು, ಮಾತುಗಳು ಬಹಳ ಆಗುತ್ತವೆ. ಪ್ರಯೋಜನ ಏನಾಗುತ್ತದೆಂದು ಕೇಳಿದರೆ, ಬಾಯಿಗೆ ತುಪ್ಪ ಸವರಿ ಬಿಟ್ಟು ಹೋಳಿಗೆ ಊಟ ಇಟ್ಟಿದ್ದೇವೆ ಎನ್ನುವ ಭಾವನೆ ಜನರಿಗೆ ಬರಬೇಕೆನ್ನುವ ರೀತಿಯಲ್ಲಿ ಆಯವ್ಯಯಗಳು ಮಂಡನೆಯಾಗುತ್ತವೆ. ನಾನು ಬಹಳ ದಿವಸಗಳಿಂದ ಈ ಸಭೆಯ ಆಯವ್ಯಯಗಳನ್ನು ನೋಡಿಕೊಂಡು ಬಂದಿದ್ದೇನೆ. ಇಲ್ಲಿ ನಾವು ಮಾತನಾಡುವುದಕ್ಕೂ, ನಾವು ಚುನಾವಣೆಯಲ್ಲಿ ಮಾತನಾಡುವುದಕ್ಕೂ, ನಾವು ರಾಜ್ಯಪಾಲರ ಭಾಷಣದಲ್ಲಿ ಹೇಳುವುದಕ್ಕೂ ಯಾವತ್ತೂ ತಾಳೆಯಾಗಲೇ ಇಲ್ಲ. ನಾವು ಚುನಾವಣಾ ಪ್ರಣಾಳಿಕೆಯಲ್ಲೇನು ಹೇಳಿ ಬರುತ್ತೇವೆ ಅಥವಾ ಆದಾದ ನಂತರ, ರಾಜ್ಯಪಾಲರ ಭಾಷಣದಲ್ಲಿ ಏನು ಹೇಳುತ್ತಾರೆ? ಯಾವ ಕಾರ್ಯಕ್ರಮಕ್ಕೆ ನಾವು ಆದ್ಯತೆ ಕೊಡುತ್ತೇವೆಂದು ಅಲ್ಲಿ ಮಾತನಾಡಿರುತ್ತೇವೆ, ಆಯವ್ಯಯ ಮಂಡನೆ ಮಾಡಬೇಕಾದರೆ ಅದಕ್ಕೆ ಆಸಕ್ತಿ ಅಥವಾ ಆದ್ಯತೆ ಏತಕ್ಕೆ ಕೊಡುತ್ತೇವೆಂದು ಯೋಚನೆ ಮಾಡಿ ಮಾಡುವ ಆಯವ್ಯಯಗಳು ಮಂಡನೆಯಾಗಿರುವುದು ಬಹಳ ಕಡಿಮೆ. ಎರಡನೆಯದಾಗಿ, ನಾನು ಸನ್ಮಾನ್ಯ ಸಿದ್ದರಾಮಯ್ಯನವರಿಗೆ ನೇರವಾಗಿ ಕೇಳುತ್ತೇನೆ, ಆಯವ್ಯಯವನ್ನು ಮಂಡಿಸುವ ಕಾಲಕ್ಕೆ, ಯಾವತ್ತಾದರೂ ಈ ಸರ್ಕಾರ ತೀರುವಳಿ ಮಾಡಬೇಕಾಗಿರುವ ಬಾಕಿಗಳ ಬಗ್ಗೆ ಮಾತನಾಡಿದೆಯೇ? ಯಾವತ್ತಾದರೂ ನಾವು ಆಯವ್ಯಯದಲ್ಲಿ ಇದ್ದಷ್ಟು ಹಣವನ್ನು ಸಂಬಂಧಪಟ್ಟ ಕಡೆಗೆ ವಿನಿಯೋಗ ಮಾಡಿದ್ದೇವೆಯೇ? ಯಾವತ್ತಾದರೂ ನಾವು ನಿರೀಕ್ಷೆ ಮಾಡಿದಷ್ಟು ರಾಜಸ್ವವನ್ನು ಈ ರಾಜ್ಯಕ್ಕೆ ತಂದಿದ್ದೇವೆಯೇ? ನಿಮ್ಮ ಕಂಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾದವರು, ಸರಾಸರಿ 9.7 ರಷ್ಟು ರೆಸಿಟ್ಸ್ ಕಡಿಮೆಯಾಗಿದೆ ಎಂದು ಹೇಳಿದ್ದಾರೆ. ನೀವೇನು ಆಯವ್ಯಯ ಮಂಡನೆ ಮಾಡಿ, ನಮಗೆ ಅಷ್ಟು ಹಣ ಬರುತ್ತದೆಂದು ಭಾಷಣದಲ್ಲಿ ಉದ್ದುದ್ದ ಹೇಳುತ್ತೀರಿ, ಸರಿಸುಮಾರು ಹತ್ತು ಪಟ್ಟಿನಷ್ಟು ಹಣ ನಮಗೆ ಬರುವುದೇ ಇಲ್ಲ. ಎರಡನೆಯದಾಗಿ, ಆಯವ್ಯಯ ಮಂಡನೆಯಲ್ಲಿ ನಾವೇನು ವಿನಿಯೋಗ ಮಾಡುತ್ತೇವೆ, ಕೊಡುತ್ತೇವೆಂದು ಹೇಳುತ್ತೇವೆ, ಬಹುಶಃ ಯಾವುದೇ ವರ್ಷ ಅಷ್ಟು ಹಣವನ್ನು ನಾವು ವಿನಿಯೋಗಿಸಲಿಲ್ಲ. ನಾನು ಉದಾಹರಣೆಗಾಗಿ ಹೇಳುತ್ತೇನೆ, ಕೆಪಿಟಿಸಿಎಲ್ ಬಗ್ಗೆ ಪ್ರತೀ ವರ್ಷ ನಾವು ಭಾಷಣ ಮಾಡುತ್ತೇವೆ, ಅದಕ್ಕೆ 2000, 2200